
ಕಥೆ




ಸುಮಂಗಲಾ

ಕಲೆ: ವಿ.ಎಂ. ಮಂಜುನಾಥ್


# ರಸ್ತೆಯಾಚೆ... ನನಗೆ ನಾನೇ!



ಅಂದು ಬೆಳಗ್ಗೆ ಎಂದಿನಂತೆ ಟೀ ಮಾಡಲು ಇಟ್ಟು, ಆಫೀಸಿನಿಂದ ಯಾರಾದರೂ ಮೆಸೇಜು ಮಾಡಿದ್ದರೆ ಎಂದು ನೋಡಲು ಮೊಬೈಲ್ ತೆರೆದ ವಿನುತಾಳಿಗೆ ಮೊದಲು ಕಂಡಿದ್ದೇ ಮೇಗಲೆಯ ಮಿಸ್ಡ್ ಕಾಲ್. ರಾತ್ರಿ ಹನ್ನೆರಡಕ್ಕೆ ಮಾಡಿದ್ದಾಳೆ... ಮೂವತ್ತು ಸೆಕೆಂಡ್ ರಿಂಗ್ ಆಗಿದೆ... ಅಂದರೆ ಅವಳು ಆಕಸ್ಮಿಕವಾಗಿ ಒತ್ತಿದ್ದೇನಲ್ಲ. ಈಗ ಫೋನ್ ಕೈಗೆತ್ತಿಕೊಂಡರೆ ಮಾಡಬೇಕಿರುವ ಕೆಲಸಗಳೆಲ್ಲ ನಿಧಾನವಾಗುತ್ತೆ, ಆದರೆ ಹೀಗೆ ನಡುರಾತ್ರಿ ಮಾಡಿದ್ದಾಳೆ ಎಂದರೆ ಏನಾಯಿತು, ಹುಷಾರುಗಿಷಾರು ಇಲ್ಲವೇನೋ ಎಂದು ಆತಂಕವೂ ಎನ್ನಿಸುತ್ತಾ, ರಮೇಶ ವಾಕಿಂಗ್ ಮುಗಿಸಿ ಬರುವಷ್ಟರಲ್ಲಿ ಮಾತುಕತೆ ಮುಗಿಸಿ ಬಿಡೋಣ ಎಂದೂ ಅನ್ನಿಸಿ, ಬ್ಲೂಟೂತ್ ಹುಡುಕಿ, ಕಿವಿಗಂಟಿಸಿಕೊಂಡು, ಟೀ ಸೋಸುತ್ತಾ ಮೇಗಲೆಗೆ ಫೋನ್ ಹಚ್ಚಿದಳು.

‘ಹೇ... ಸಾರಿ ಕಣೇ... ಫೋನ್ ಸೈಲೆಂಟ್ ಮೋಡ್‌ನಲ್ಲಿತ್ತು. ಈಗ ಮಿಸ್ಡ್ ಕಾಲ್ ನೋಡಿದೆ. ಹುಷಾರಾಗಿದೀಯ ತಾನೆ?’, ‘ಯಾಕೋ ತುಂಬಾ ಬೇಜಾರು ಅನ್ನಿಸಿಬಿಟ್ಟಿದೆ ವಿನೀ... ರಾತ್ರಿಯೆಲ್ಲ ಸರಿಯಾಗಿ ನಿದ್ದೆನೂ ಬರಲಿಲ್ಲ. ಒಂಥರಾ ಒಂಟಿತನ.... ದಿನದ ಕೊನೇಲಿ ನಾನೊಬ್ಬಳೇ ಅನ್ನಿಸಿಬಿಡುತ್ತೆ. ನಿನ್ನೆ ರಾತ್ರಿ ವಿಪರೀತ ಸಂಕಟ ಅನ್ನಿಸಿ ನಿಂಗೆ ಕಾಲ್ ಮಾಡಿದೆ ಕಣೇ...’ ‘ಸಾರಿ ಕಣೇ. ಕೆಲವು ಸಲ ನಡುರಾತ್ರಿಗೂ ಯಾವ್ಯಾವುದೋ ಪ್ರಮೋಶನಲ್ ಕಾಲ್ ಬರ್ತಾ ಇರುತ್ತೆ. ಹಿಂಗಾಗಿ ಸೈಲೆಂಟ್ ಮೋಡಿಗೆ ಹಾಕಿರತೀನಿ...’